# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 557 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : | ಶ್ರೀ ಎಸ್ ಎಲ್ ಧರ್ಮೇಗೌಡ |
| ಉತ್ತರಿಸಬೇಕಾದ ದಿನಾಂಕ | : | 13.12.2018 |
| ಉತ್ತರಿಸುವ ಸಚಿವರು | : | ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು. |

| ಕ್ರ.ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು ಯಾವುವು ; ಅವುಗಳ ಪೂರ್ಣ ಮಾಹಿತಿ ನೀಡುವುದು ? | ಅನುಬಂಧ-1ರಲ್ಲಿ ನೀಡಲಾಗಿದೆ |
| ಆ) | ಕಳೆದ ಮೂರು ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅನುಷ್ಠಾನ ಮಾಡಲಾದ ಯೋಜನೆಗಳು ನಿಗಧಿಪಡಿಸಿದ ಗುರಿ ಮತ್ತು ಸಾಧನೆಯ ಪ್ರಗತಿಗಳನ್ನು ತಾಲ್ಲೂಕುವಾರು ಮಾಹಿತಿ ನೀಡುವುದು | ಅನುಬಂಧ-2ರಲ್ಲಿ ನೀಡಲಾಗಿದೆ |
| ಇ) | ಕಳೆದ ಮೂರು ವರ್ಷಗಳಲ್ಲಿ ಈ ಯೋಜನೆಗಳ ಅಡಿಯಲ್ಲಿ ಬಿಡುಗಡೆ ಮಾಡಲಾದ ಅನುದಾನ ಎಷ್ಟು ; (ತಾಲ್ಲೂಕುವಾರು ಮಾಹಿತಿ ನೀಡುವುದು) | |
| ಈ) | ತಾಲ್ಲೂಕುವಾರು ಗುರಿ ನಿಗಧಿಪಡಿಸಲು ಇರುವ ಮಾನದಂಡಗಳೇನು ? (ಮಾಹಿತಿ ನೀಡುವುದು) | ಅನುಬಂಧ-3ರಲ್ಲಿ ನೀಡಲಾಗಿದೆ |

ಸಂಖ್ಯೆ:ಮಮಇ:136:ಸ್ವೀಮರ:2018

(ಡಾ॥ ಜಯಮಾಲ)
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ
ಮತ್ತು ಹಿರಿಯ ನಾಗರೀಕರ ಸಬಲೀಕರಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಧರ್ಮೇಗೌಡ ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:557ಕ್ಕೆ ಅನುಬಂಧ-1.

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ರಾಜ್ಯದಲ್ಲಿ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ 2000–01ನೇ ಸಾಲಿನಿಂದ ಸ್ತ್ರೀಶಕ್ತಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ.

## ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ಹೊಸದಾಗಿ ವಿಕಲಚೇತನರಿಗೆ ವಿಶಿಷ್ಟ ಗುರುತಿನ ಚೀಟಿ ಯೋಜನೆ ಹಾಗೂ ಹಿರಿಯ ನಾಗರಿಕರಿಗೆ ಆನ್–ಲೈನ್‌ನಲ್ಲಿ ಗುರುತಿನ ಚೀಟಿ ವಿತರಣೆ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಮಿಕ್ಕಂತೆ ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಘೋಷಣೆಯಾಗಿರುವ ಯೋಜನೆಗಳಿಗೆ ನಿಯಮಾನುಸಾರ ಮಾರ್ಗಸೂಚಿಗಳನ್ನು ಮಾಡಲಾಗುತ್ತಿದೆ

## ಮಹಿಳೆಯರು ಹಾಗೂ ಮಕ್ಕಳಿಗಾಗಿ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳು

- **ಅಂಗವಿಕಲ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಮತ್ತು ಪ್ರೋತ್ಸಾಹನ ಧನ :** ಈ ಯೋಜನೆಯಡಿ ಒಂದನೇ ತರಗತಿಯಿಂದ ಸ್ನಾತಕೋತ್ತರ ಪದವಿಯವರೆಗೆ ವ್ಯಾಸಂಗ ಮಾಡುತ್ತಿರುವ ಅರ್ಹ ವಿಕಲಚೇತನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನವನ್ನು ಆಯಾ ಜಿಲ್ಲಾ ಕಛೇರಿಗಳ ಮೂಲಕ ಮಂಜೂರು ಮಾಡಲಾಗುತ್ತಿದೆ. ಈ ಯೋಜನೆಯಡಿ ಫಲಾನುಭವಿಗಳಿಗೆ ಆದಾಯ ಮಿತಿಯಿಂದ ವಿನಾಯಿತಿಗೊಳಿಸಲಾಗಿದೆ. ಪ್ರಸ್ತುತ ನೀಡಲಾಗುತ್ತಿರುವ ತರಗತಿವಾರು ವಿದ್ಯಾರ್ಥಿ ವೇತನದ ವಿವರ ಈ ಕೆಳಕಂಡಂತಿದೆ.

- **ಅನುದಾನ ಸಂಹಿತ 1982ರಡಿ ನಡೆಸಲಾಗುತ್ತಿರುವ ವಿಶೇಷ ಶಾಲೆಗಳು** 1982ರ ರಾಜ್ಯ ಅನುದಾನ ಸಂಹಿತೆಯಡಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳ ಮೂಲಕ 34 ವಿಶೇಷ ಶಾಲೆ/ ತರಬೇತಿ ಕೇಂದ್ರಗಳನ್ನು ದೈಹಿಕ, ಅಂಧ, ಶ್ರವಣದೋಷ ಹಾಗೂ ಬುದ್ಧಿಮಾಂದ್ಯ ಮಕ್ಕಳಿಗಾಗಿ ನಡೆಸಲಾಗುತ್ತಿದೆ. ರಾಜ್ಯ ಸರ್ಕಾರದಿಂದ ಅನುದಾನವನ್ನು ಜಿಲ್ಲಾ ಪಂಚಾಯತ್ ಮೂಲಕ ಬಿಡುಗಡೆ ಮಾಡಲಾಗುತ್ತಿದೆ.

- **ಅಂಗವಿಕಲ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ :** ಈ ಯೋಜನೆಯಡಿ ಬುದ್ದಿಮಾಂದ್ಯ (ಸೆರಬ್ರಲ್ ಪಾಲ್ಸಿ, ಆಟಿಸಂ), ದೃಷ್ಟಿದೋಷ, ಶ್ರವಣದೋಷವುಳ್ಳ ಮಕ್ಕಳಿಗಾಗಿ ವಸತಿಯುತ ಹಾಗೂ ವಸತಿರಹಿತ ಶಾಲೆಗಳು ಸೇರಿದಂತೆ ಒಟ್ಟು 141 ವಿಶೇಷ ಶಾಲೆಗಳು ಸ್ವಯಂ ಸೇವಾ ಸಂಸ್ಥೆಗಳ ಮೂಲಕ ನಡೆಯುತ್ತಿವೆ. ಮಕ್ಕಳ ಸಂಖ್ಯೆಗೆ ಅನುಗುಣವಾಗಿ ಶ್ರವಣದೋಷವುಳ್ಳ ಹಾಗೂ ದೃಷ್ಟಿದೋಷವುಳ್ಳ ಮಕ್ಕಳ

ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.6200/- ರಂತೆ ಹಾಗೂ ವಸತಿರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.5200/- ರಂತೆ ಹಾಗೂ ಬುದ್ಧಿಮಾಂದ್ಯ ಮಕ್ಕಳ ಮಕ್ಕಳ ವಸತಿಯುತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ.6800/- ರಂತೆ ಹಾಗೂ ವಸತಿರಹಿತ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿ ಮಗುವಿನ ನಿರ್ವಹಣೆಗೆ ಮಾಹೆಯಾನ ತಲಾ ರೂ. 6000/- ರಂತೆ ವರ್ಷದಲ್ಲಿ 10 ತಿಂಗಳ ಅವಧಿಗೆ ಅನುದಾನವನ್ನು ಮಂಜೂರು ಮಾಡಲಾಗುತ್ತಿದೆ. ಈ ಅನುದಾನದಲ್ಲಿ ಶಿಕ್ಷಕರ ಗೌರವಧನ, ಮಕ್ಕಳ ಆಹಾರ ವೆಚ್ಚ, ಕಟ್ಟಡದ ಬಾಡಿಗೆ ಹಾಗೂ ನಿರ್ವಹಣಾ ವೆಚ್ಚ, ಸಮವಸ್ತ್ರ, ವೈದ್ಯಕೀಯ ವೆಚ್ಚ ಹಾಗೂ ಸಾದಿಲ್ವಾರು ವೆಚ್ಚಗಳು ಒಳಗೊಂಡಿರುತ್ತವೆ.

- **ನಿರಾಮಯ :** ಕೇಂದ್ರ ಸರ್ಕಾರದ ನ್ಯಾಷನಲ್ ಟ್ರಸ್ಟ್-1999 ಅಧಿನಿಯಮದಡಿ ಬರುವ 04 ಬಗೆಯ ವಿಕಲಚೇತನರಿಗೆ (ಬುದ್ಧಿ ಮಾಂದ್ಯರು, ಸೆರಬ್ರಲ್ ಪಾಲ್ಸಿ, ಆಟಿಸಂ ಮತ್ತು ಬಹುವಿಧ ಅಂಗವಿಕಲರು) "ನಿರಾಮಯ" ಆರೋಗ್ಯ ವಿಮಾ ಯೋಜನೆ ಯನ್ನು ಜಾರಿಗೆ ತಂದಿದ್ದು, ಸದರಿ ಯೋಜನೆ ಯನ್ವಯ ಕರ್ನಾಟಕ ರಾಜ್ಯದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ 04 ಬಗೆಯ ವಿಕಲಚೇತನ ವ್ಯಕ್ತಿಗಳಿಗೆ ಪ್ರಥಮ ಬಾರಿ ಒಂದುಸಲ ವಾರ್ಷಿಕ ರೂ.250/-ಗಳನ್ನು ಸರ್ಕಾರದ ವತಿಯಿಂದ ವಿಮಾ ಕಂತಾಗಿ ಪಾವತಿಸಿ ಪ್ರತಿ ವರ್ಷ ರೂ.1.00 ಲಕ್ಷದವರೆಗೆ ವೈದ್ಯಕೀಯ ಸೌಲಭ್ಯ ಪಡೆಯಲು ಅವಕಾಶ ಕಲ್ಪಿಸಲಾಗಿದೆ.

- **ಶಿಶುಪಾಲನಾ ಭತ್ಯೆ ಯೋಜನೆ :** ಅಂಧ ಮಹಿಳೆಯರು ಮಗುವಿಗೆ ಜನ್ಮ ನೀಡಿದಾಗ ಆ ಮಗುವನ್ನು ಇತರೆ ಸಾಮಾನ್ಯ ತಾಯಂದಿರಂತೆ ಆರೈಕೆ ಮಾಡುವುದು ಕಷ್ಟಕರವಾಗಿರುತ್ತದೆ. ಇಂತಹ ಅಂಧ ಮಹಿಳೆಯರಿಗೆ ಜನಿಸುವ ಮಕ್ಕಳಿಗೆ ಆರೈಕೆ ಮಾಡಲು ಆರೋಗ್ಯ ಪಾಲನೆ, ಪೌಷ್ಠಿಕ ಆಹಾರ, ಔಷಧೋಪಚಾರಗಳಿಗೆ ಮಾಹೆಯಾನ ರೂ.2000/- ದಂತೆ 2 ವರ್ಷಗಳ ಅವಧಿಗೆ ಸಹಾಯಧನವನ್ನು ನೀಡಲಾಗುತ್ತಿದೆ. ಈ ಸೌಲಭ್ಯವನ್ನು ಕನಿಷ್ಠ 2 ಮಕ್ಕಳವರೆಗೆ ಪಡೆಯಬಹುದಾಗಿದೆ.

- **ಶುಲ್ಕ ಮರುಪಾವತಿ :** ಎಸ್.ಎಸ್.ಎಲ್.ಸಿ. ನಂತರ ಉನ್ನತ ಶಿಕ್ಷಣ, ವೃತ್ತಿ ಶಿಕ್ಷಣ, ತಾಂತ್ರಿಕ ಶಿಕ್ಷಣ, ಸ್ನಾತಕೋತ್ತರ, ಔದ್ಯೋಗಿಕ ಶಿಕ್ಷಣಗಳಿಗೆ ನಿಯಮಾನುಸಾರ ಆಯ್ಕೆಯಾಗುವ ವಿಕಲಚೇತನ ವಿದ್ಯಾರ್ಥಿಗಳಿಗೆ ಸರ್ಕಾರವು ನಿಗದಿಪಡಿಸಿರುವ ಪರೀಕ್ಷಾ ಶುಲ್ಕ, ಬೋಧನಾ ಶುಲ್ಕ, ಪ್ರಯೋಗಾಲಯ ಶುಲ್ಕ, ಕ್ರೀಡಾ ಶುಲ್ಕ ಹಾಗೂ ಗ್ರಂಥಾಲಯ ಶುಲ್ಕಗಳನ್ನು ಮರು ಪಾವತಿಸುವ ಯೋಜನೆಯು ಜಾರಿಗೆ ಬಂದಿರುತ್ತದೆ.

## ಕನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

### ರಾಜ್ಯದಲ್ಲಿ ಮಹಿಳೆಯರ ಆರ್ಥಿಕ ಸಬಲೀಕರಣಕ್ಕಾಗಿ ಮತ್ತು ಮಹಿಳೆಯರ ಅಭಿವೃದ್ಧಿಗಾಗಿಕರ್ನಾಟಕರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳ ವಿವರ

- **ಉದ್ಯೋಗಿನಿ ಯೋಜನೆ :** ಮಹಿಳೆಯರು ಆದಾಯಉತ್ಪನ್ನಕರ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡು ಸ್ವಯಂ ಉದ್ಯೋಗಿಗಳಾಗಲು ಬ್ಯಾಂಕುಗಳ ಸಾಲ ಮತ್ತು ನಿಗಮದ ಮೂಲಕ ಸಹಾಯಧನ ನೀಡಲಾಗುತ್ತಿದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸಾಲದಘಟಕ ವೆಚ್ಚ ಗರಿಷ್ಟ ರೂ.3.00 ಲಕ್ಷಗಳು, ಸಹಾಯಧನದ ಮೊತ್ತ ಶೇ.50 ರಷ್ಟುಗರಿಷ್ಟ ರೂ.1,50,000/-. ಕುಟುಂಬದ ವಾರ್ಷಿಕಆದಾಯದಗರಿಷ್ಟ ಮಿತಿ ರೂ.2.00 ಲಕ್ಷಗಳು. ಸಾಮಾನ್ಯ ವರ್ಗ ಮತ್ತು ವಿಶೇಷ ವರ್ಗದ ಫಲಾನುಭವಿಗಳಿಗೆ ಸಾಲದಘಟಕ ವೆಚ್ಚ ಗರಿಷ್ಟ ರೂ.3.00 ಲಕ್ಷಗಳು, ಸಹಾಯಧನದ ಮೊತ್ತ ಶೇ.30 ರಷ್ಟುಗರಿಷ್ಟ ರೂ.90,000/-. ಕುಟುಂಬದ ವಾರ್ಷಿಕಆದಾಯದಗರಿಷ್ಟ ಮಿತಿ ರೂ.1.50 ಲಕ್ಷಗಳು. ಎಲ್ಲಾ ವರ್ಗದ ಮಹಿಳೆಯರಿಗೆ ವಯೋಮಿತಿ 18 ರಿಂದ 55 ವರ್ಷಗಳು.

- **ಕಿರುಸಾಲ ಯೋಜನೆ :** ಸ್ತ್ರೀಶಕ್ತಿ ಸ್ವ ಸಹಾಯ ಗುಂಪಿನ ಸದಸ್ಯರುಗಳು ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ಪ್ರತಿ ಗುಂಪಿಗೆ ಬಡ್ಡಿರಹಿತವಾಗಿ ರೂ.1.00 ಲಕ್ಷದಿಂದ ರೂ.2.00 ಲಕ್ಷಗಳವರೆಗೆ ಸಾಲವನ್ನುಆರ್.ಟಿ.ಜಿ.ಎಸ್. ಮೂಲಕ ನೇರವಾಗಿ ನೀಡಲಾಗುತ್ತಿದೆ.

- **ಸಮೃದ್ಧಿ ಯೋಜನೆ :** 2016-17ನೇ ಸಾಲಿನಿಂದ ಬೀದಿಬದಿಯಲ್ಲಿ ಸಣ್ಣ ವ್ಯಾಪಾರ ನಡೆಸುತ್ತಿರುವ ಬಡತನರೇಖೆಗಿಂತ ಕೆಳಗಿರುವ 18 ರಿಂದ 60 ವಯೋಮಾನದ ಮಹಿಳೆಯರಿಗೆ ತಲಾ ರೂ.10,000/- ಗಳಂತೆ ಪ್ರೋತ್ಸಾಹಧನ ನೀಡಲಾಗುತ್ತಿದೆ.

- **ಧನಶ್ರೀ ಯೋಜನೆ :** 2016-17ನೇ ಸಾಲಿನಿಂದ ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರುವ 18 ರಿಂದ 60 ವಯೋಮಿತಿಯ ಹೆಚ್.ಐ.ವಿ. ಸೋಂಕಿತ ಮಹಿಳೆಯರಿಗೆ ಸ್ವಯಂಉದ್ಯೋಗ ಕೈಗೊಳ್ಳಲು ತಲಾ ರೂ.25,000/-ಗಳ ನೇರ ಸಾಲ ಹಾಗೂ ರೂ.25,000/- ಗಳ ಪ್ರೋತ್ಸಾಹಧನವನ್ನುಇ.ಡಿ.ಪಿ. ತರಬೇತಿಯೊಂದಿಗೆ ನೀಡಲಾಗುತ್ತಿದೆ.

- **ಚೇತನಯೋಜನೆ :** ದಮನಿತ ಮಹಿಳೆಯರು ಆದಾಯೋತ್ಪನ್ನಚಟುವಟಿಕೆ ಕೈಗೊಳ್ಳಲು ಅನುವಾಗುವಂತೆ ನಿಗಮದಿಂದ ನೇರವಾಗಿತಲಾ ರೂ.25,000/- ಗಳ ನೇರ ಸಾಲ ಹಾಗೂ ರೂ.25,000/- ಗಳ ಪ್ರೋತ್ಸಾಹಧನವನ್ನುಇ.ಡಿ.ಪಿ. ತರಬೇತಿಯೊಂದಿಗೆ ನೀಡಲಾಗುತ್ತಿದೆ.

- **ಲಿಂಗತ್ವಅಲ್ಪಸಂಖ್ಯಾತರ ಪುನರ್ವಸತಿಯೋಜನೆ :** ಲಿಂಗತ್ವಅಲ್ಪಸಂಖ್ಯಾತರನ್ನು ಸಮಾಜದ ಮುಖ್ಯವಾಹಿನಿಗೆ ತರುವಉದ್ದೇಶದಿಂದ 2012-13ನೇ ಸಾಲಿನಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.ಅವರನ್ನು ಸಬಲೀಕರಣಗೊಳಿಸಲು ನಿಗಮದಿಂದ ನೇರವಾಗಿತಲಾ ರೂ.25,000/-ಗಳ ನೇರ ಸಾಲ ಹಾಗೂ ರೂ.25,000/-ಗಳ ಪ್ರೋತ್ಸಾಹಧನವನ್ನು ಇ.ಡಿ.ಪಿ. ತರಬೇತಿಯೊಂದಿಗೆ ನೀಡಲಾಗುತ್ತಿದೆ.

- **ಮಾರುಕಟ್ಟೆ ನೆರವುಯೋಜನೆ :** ಮಹಿಳಾ ಉದ್ದಿಮೆದಾರರನ್ನುಉತ್ತೇಜಿಸುವ ಸಲುವಾಗಿ ಹಾಗೂ ಮಹಿಳಾ ಸ್ವ ಸಹಾಯ ಸಂಘಗಳು ತಯಾರಿಸಿ ಉತ್ಪನ್ನಗಳನ್ನು ಮಾರಾಟ ಮಾಡಲುಜಿಲ್ಲಾ ಮತ್ತುತಾಲ್ಲೂಕು ಮಟ್ಟದಲ್ಲಿ ವಸ್ತುಪ್ರದರ್ಶನಏರ್ಪಡಿಸಲಾಗುವುದು.

- **ಮಹಿಳಾ ತರಬೇತಿಯೋಜನೆ :** ಆರ್ಥಿಕವಾಗಿ ಹಿಂದುಳಿದ ಮಹಿಳೆಯರು ಮತ್ತು ವಿಶೇಷ ವರ್ಗದವರಿಗೆ ಹಾಗೂ ಪ.ಜಾತಿ ಮತ್ತು ಪ.ಪಂಗಡಕ್ಕೆ ಸೇರಿದ ಮಹಿಳೆಯರುಗೆ ಕೌಶಲ್ಯತರಬೇತಿ ನೀಡಿ, ಅವರಲ್ಲಿ ಉದ್ಯಮಶೀಲತೆಯನ್ನು ಬೆಳೆಸುವುದು. ಹಾಗೂ ಈ ತರಬೇತಿಗಳನ್ನು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತುಜೀವನೋಪಾಯಇಲಾಖೆಯ ಮಾರ್ಗಸೂಚಿಯಂತೆ ನಡೆಸಲಾಗುತ್ತಿದೆ.

- **ಮಹಿಳಾ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ (ಕರ್ನಾಟಕ ರಾಜ್ಯ ಆರ್ಥಿಕ ಹಣಕಾಸು ನಿಗಮ ಮೂಲಕ) – (2015–16) :** ಮಹಿಳೆಯರು ಸಣ್ಣ/ ಮಧ್ಯಮಕೈಗಾರಿಕೆ ಹಾಗೂ ಸೇವಾ ಘಟಕಗಳನ್ನು ಪ್ರಾರಂಭಿಸಿ ಉದ್ಯೋಗ ಚಟುವಟಿಕೆಗಳಲ್ಲಿ ತೊಡಗಲು ಕನಿಷ್ಟ ರೂ.5.00 ಲಕ್ಷದಿಂದ ರೂ.200.00 ಲಕ್ಷಗಳ ಸಾಲವನ್ನುಕರ್ನಾಟಕರಾಜ್ಯಆರ್ಥಿಕ ಹಣಕಾಸು ನಿಗಮ ಮೂಲಕ ನೀಡಲಾಗುತ್ತದೆ.ಕರ್ನಾಟಕರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಶೇ.10ರಷ್ಟು ಬಡ್ಡಿ ಸಹಾಯಧನ ನೀಡಲಾಗುತ್ತಿದೆ.

- **ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಮಹಿಳೆಯರಿಗೆ ಬಡ್ಡಿ ಸಹಾಯಧನಯೋಜನೆ (2018–19) :** 2018–19ನೇ ಸಾಲಿನ ಆಯವ್ಯಯ ಘೋಷಣೆಯಂತೆ ಇಲಾಖೆಯ ಮೇಲ್ವಿಚಾರಕಿಯರ ಕಾರ್ಯದಕ್ಷತೆಯನ್ನು ಹೆಚ್ಚಿಸಲು ಮೇಲ್ವಿಚಾರಕಿಯರಿಗೆ ಕರ್ನಾಟಕ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಸ್ಕೂಟರ್ ಖರೀದಿಸಲು 50,000 ರೂ.ಗಳ ಬಡ್ಡಿರಹಿತ ಸಾಲವನ್ನು ನೀಡಲಾಗುವುದು.

************

## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಧರ್ಮೇಗೌಡ ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:557ಕ್ಕೆ ಅನುಬಂಧ-2.

### ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಕಳೆದ ಮೂರು ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ಸ್ತ್ರೀಶಕ್ತಿ ಯೋಜನೆಯಡಿ ಬಿಡುಗಡೆ ಮಾಡಿದ ಅನುದಾನ ಹಾಗೂ ನಿಗಧಿಪಡಿಸಿದ ಗುರಿ ಹಾಗೂ ಸಾಧನೆಯ ವಿವರ (ರೂ.ಲಕ್ಷಗಳಲ್ಲಿ)

| ಕ್ರ ಸಂ. | ತಾಲ್ಲೂಕು | 2015-16 | | | 2016-17 | | | 2017-18 | | |
|---|---|---|---|---|---|---|---|---|---|---|
| | | ಗುರಿ | ಸಾಧನೆ | ಬಿಡುಗಡೆ | ಗುರಿ | ಸಾಧನೆ | ಬಿಡುಗಡೆ | ಗುರಿ | ಸಾಧನೆ | ಬಿಡುಗಡೆ |
| 1 | ಚಿಕ್ಕಮಗಳೂರು | 26.81 | 26.81 | 26.81 | 28.31 | 28.31 | 28.31 | 31.20 | 31.20 | 31.20 |
| 2 | ಕಡೂರು | 21.75 | 21.75 | 21.75 | 24.30 | 24.30 | 24.30 | 25.43 | 25.43 | 25.43 |
| 3 | ತರೀಕೆರೆ | 32.03 | 32.03 | 32.02 | 29.96 | 29.96 | 29.96 | 29.24 | 29.24 | 29.24 |
| 4 | ಮೂಡಿಗೆರೆ | 21.66 | 21.66 | 21.66 | 16.49 | 16.49 | 16.49 | 14.71 | 14.71 | 14.71 |
| 5 | ಕೊಪ್ಪ | 13.32 | 13.32 | 13.32 | 13.44 | 13.44 | 13.44 | 15.98 | 15.98 | 15.98 |
| 6 | ಶೃಂಗೇರಿ | 8.96 | 8.96 | 8.96 | 8.76 | 8.76 | 8.76 | 8.88 | 8.88 | 8.88 |
| 7 | ನ.ರಾ.ಪುರ | 10.83 | 10.83 | 10.83 | 11.34 | 11.34 | 11.34 | 10.04 | 10.04 | 10.04 |
| | ಒಟ್ಟು | 135.36 | 135.36 | 135.36 | 132.60 | 132.60 | 132.60 | 135.50 | 135.50 | 135.50 |

### ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ತಾಲ್ಲೂಕುವಾರು ಗುರಿಗಳನ್ನು ನಿಗದಿಪಡಿಸುವ ವ್ಯವಸ್ಥೆ ಇರುವುದಿಲ್ಲ. ನಿಜವಾದ ಬೇಡಿಕೆಯನ್ನು ಆಧರಿಸಿ ಜಿಲ್ಲಾವಾರು ಗುರಿ ನಿಗದಿಪಡಿಸಲಾಗುವುದು.

| ಕ್ರ.ಸ | ಯೋಜನೆಯ ಹೆಸರು | ತಾಲ್ಲೂಕು | 2015-16 (ಲಕ್ಷಗಳಲ್ಲಿ) | | 2016-17 (ಲಕ್ಷಗಳಲ್ಲಿ) | | 2017-18 (ಲಕ್ಷಗಳಲ್ಲಿ) | |
|---|---|---|---|---|---|---|---|---|
| | | | ಗುರಿ / ಬಿಡುಗಡೆ | ಸಾಧನೆ | ಗುರಿ / ಬಿಡುಗಡೆ | ಸಾಧನೆ | ಗುರಿ / ಬಿಡುಗಡೆ | ಸಾಧನೆ |
| 1 | ಅಂಗವಿಕಲರಿಗೆ ವಿದ್ಯಾರ್ಥಿವೇತನ ಮತ್ತು ಪ್ರೋತ್ಸಾಹ ಧನ ಯೋಜನೆ | ಚಿಕ್ಕಮಗಳೂರು | 5.85 | 4.85 | 3.27 | 3.27 | 4.91 | 4.82 |
| | | ಕಡೂರು | 3.89 | 3.39 | 3.21 | 3.18 | 1.98 | 1.98 |
| | | ತರೀಕೆರೆ | 1.82 | 1.31 | 2.42 | 2.33 | 1.56 | 1.56 |
| | | ಮೂಡಿಗೆರೆ | 0.38 | 0.38 | 0.38 | 0.33 | 0.36 | 0.36 |
| | | ಕೊಪ್ಪ | 0.76 | 0.76 | 0.48 | 0.45 | 0.78 | 0.78 |
| | | ಶೃಂಗೇರಿ | 0.97 | 0.97 | 0.48 | 0.31 | 0.30 | 0.30 |
| | | ಎನ್.ಆರ್.ಪುರ | 0.68 | 0.68 | 0.39 | 0.26 | 0.20 | 0.20 |
| | | ಒಟ್ಟು | 14.35 | 12.34 | 10.63 | 10.13 | 10.09 | 10.00 |
| 2 | 1982ರ ಅನುದಾನ ಸಂಹಿತೆಯಡಿ ಅನುದಾನ | ಚಿಕ್ಕಮಗಳೂರು | 72.00 | 71.83 | 86.00 | 77.17 | 89.00 | 74.72 |
| | | ಕಡೂರು | - | - | - | - | - | - |
| | | ತರೀಕೆರೆ | - | - | - | - | - | - |
| | | ಮೂಡಿಗೆರೆ | - | - | - | - | - | - |
| | | ಕೊಪ್ಪ | - | - | - | - | - | - |
| | | ಶೃಂಗೇರಿ | - | - | - | - | - | - |
| | | ಎನ್.ಆರ್.ಪುರ | - | - | - | - | - | - |
| | | ಒಟ್ಟು | 72.00 | 71.83 | 86.00 | 77.17 | 89.00 | 74.72 |

(2)

| | | | | | | | | |
|---|---|---|---|---|---|---|---|---|
| 3 | ಅಂಗವಿಕಲರ ಮಕ್ಕಳ ಕೇಂದ್ರೀಕೃತ ವಿಶೇಷ ಶೈಕ್ಷಣಿಕ ಯೋಜನೆ | ಚಿಕ್ಕಮಗಳೂರು | – | – | – | – | | |
| | | ಕಡೂರು | 31.50 | 31.50 | 103.68 | 103.68 | 111.02 | 111.02 |
| | | ತರೀಕೆರೆ | – | – | – | – | – | – |
| | | ಮೂಡಿಗೆರೆ | – | – | – | – | – | – |
| | | ಕೊಪ್ಪ | – | – | – | – | – | – |
| | | ಶೃಂಗೇರಿ | – | – | – | – | – | – |
| | | ಎನ್.ಆರ್.ಪುರ | – | – | – | – | – | – |
| | | ಒಟ್ಟು | 31.50 | 31.50 | 103.68 | 103.68 | 111.02 | 111.02 |
| 4 | ನಿರಾಮಯ | ಚಿಕ್ಕಮಗಳೂರು | 0.13 | 0.13 | 0.06 | 0.05 | 0.32 | 0 |
| | | ಕಡೂರು | 0.08 | 0.08 | 0.02 | 0.01 | | 0 |
| | | ತರೀಕೆರೆ | 0.01 | 0.01 | 0.03 | 0.02 | | 0 |
| | | ಮೂಡಿಗೆರೆ | 0.05 | 0.05 | 0.02 | 0.01 | | 0 |
| | | ಕೊಪ್ಪ | 0.02 | 0.02 | 0.02 | 0.01 | | 0 |
| | | ಶೃಂಗೇರಿ | 0.01 | 0.01 | 0 | 0 | | 0 |
| | | ಎನ್.ಆರ್.ಪುರ | 0.01 | 0.01 | 0 | 0 | | 0 |
| | | ಒಟ್ಟು | 0.31 | 0.31 | 0.15 | 0.10 | 0.32 | 0 |

| | | | | | | | | |
|---|---|---|---|---|---|---|---|---|
| 6 | ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಲ್ಲಿ ದೃಷ್ಟಿಹೀನ ಮಹಿಳೆಯ ಎರಡು ಹೆರಿಗೆಯವರೆಗೆ ಶಿಶುಪಾಲನ ಭತ್ಯೆ | ಚಿಕ್ಕಮಗಳೂರು | 0.48 | 0.48 | 1.00 | 0.48 | 0.56 | 0.48 |
| | | ಕಡೂರು | 0.48 | 0.48 | 0.48 | 0.48 | 0.22 | 0.22 |
| | | ತರೀಕೆರೆ | 0.16 | 0.16 | 0.48 | 0.48 | 0.22 | 0.22 |
| | | ಮೂಡಿಗೆರೆ | – | – | – | – | – | – |
| | | ಕೊಪ್ಪ | – | – | – | – | – | – |
| | | ಶೃಂಗೇರಿ | – | – | – | – | – | – |
| | | ಎನ್.ಆರ್.ಪುರ | – | – | – | – | – | – |
| | | ಒಟ್ಟು | 1.12 | 1.12 | 1.54 | 1.44 | 1.00 | 0.92 |
| 7 | ಶುಲ್ಕ ಮರುಪಾವತಿ | ಚಿಕ್ಕಮಗಳೂರು | 1.98 | 1.58 | 2.89 | 2.89 | 1.75 | 1.75 |
| | | ಕಡೂರು | 1.22 | 0.50 | 0.27 | 0.27 | 0.76 | 0.76 |
| | | ತರೀಕೆರೆ | 0.98 | 0.48 | 0.09 | 0.09 | 0.38 | 0.38 |
| | | ಮೂಡಿಗೆರೆ | 0 | 0.11 | 0.03 | 0.03 | – | – |
| | | ಕೊಪ್ಪ | 0 | 0.08 | 0.20 | 0.20 | – | – |
| | | ಶೃಂಗೇರಿ | 0 | 0.18 | 0.13 | 0.13 | 0.17 | 0.17 |
| | | ಎನ್.ಆರ್.ಪುರ | 0 | 0.03 | 0.11 | 0.11 | – | – |
| | | ಒಟ್ಟು | 3.03 | 2.96 | 3.62 | 3.52 | 3.00 | 3.00 |

(3)

## ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

| ಕ್ರ ಸಂ | ಯೋಜನೆಗಳ ಹೆಸರು | ತಾಲೂಕಿನ ಹೆಸರು | 2015-16 | | | | 2016-17 | | | | 2017-18 | | | |
|---|---|---|---|---|---|---|---|---|---|---|---|---|---|---|
| | | | ಗುರಿ | | ಸಾಧನೆ | | ಗುರಿ | | ಸಾಧನೆ | | ಗುರಿ | | ಸಾಧನೆ | |
| | | | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ | ಭೌತಿಕ | ಆರ್ಥಿಕ |
| 1 | ಉದ್ಯೋಗಿನಿ ಯೋಜನೆ | ಚಿಕ್ಕಮಗಳೂರು | 56 | 4.33 | 56 | 4.80 | 75 | 9.99 | 19 | 4.11 | 12 | 5.31 | 19 | 5.77 |
| | | ಕಡೂರು | 66 | 4.97 | 73 | 6.26 | 73 | 9.83 | 68 | 10.80 | 12 | 8.14 | 20 | 7.54 |
| | | ತರೀಕೆರೆ | 54 | 4.17 | 38 | 3.34 | 62 | 8.92 | 33 | 8.45 | 11 | 5.18 | 21 | 5.92 |
| | | ಮೂಡಿಗೆರೆ | 47 | 3.50 | 24 | 2.25 | 62 | 8.85 | 34 | 5.16 | 12 | 5.29 | 20 | 5.40 |
| | | ಕೊಪ್ಪ | 23 | 1.54 | 9 | 0.75 | 19 | 3.30 | 13 | 2.92 | 3 | 1.67 | 2 | 1.01 |
| | | ಶೃಂಗೇರಿ | 22 | 1.43 | 24 | 2.11 | 19 | 3.27 | 7 | 1.40 | 4 | 3.17 | 11 | 1.28 |
| | | ನ.ರಾ.ಪುರ | 16 | 1.06 | 7 | 0.57 | 19 | 2.85 | 0 | 0 | 4 | 1.74 | 3 | 0.24 |
| | ಒಟ್ಟು | | 284 | 21.00 | 231 | 20.08 | 329 | 47.01 | 174 | 32.84 | 58.00 | 30.50 | 96 | 27.16 |
| 2 | ಕಿರುಸಾಲ ಯೋಜನೆ | ಚಿಕ್ಕಮಗಳೂರು | 1 | 2.00 | 1 | 2.00 | 2 | 4.00 | 2 | 4.00 | 2 | 4.00 | 2 | 4.00 |
| | | ಕಡೂರು | 1 | 2.00 | 1 | 2.00 | 2 | 4.00 | 3 | 6.00 | 2 | 4.00 | 2 | 4.00 |
| | | ತರೀಕೆರೆ | 1 | 2.00 | 1 | 2.00 | 2 | 4.00 | 2 | 4.00 | 1 | 2.00 | 1 | 2.00 |
| | | ಮೂಡಿಗೆರೆ | 1 | 2.00 | 1 | 2.00 | 2 | 4.00 | 2 | 4.00 | 1 | 2.00 | 1 | 2.00 |
| | | ಕೊಪ್ಪ | – | – | – | – | 1 | 2.00 | 1 | 2.00 | 1 | 2.00 | 1 | 1.00 |
| | | ಶೃಂಗೇರಿ | 1 | 2.00 | 1 | 2.00 | 1 | 2.00 | 1 | 2.00 | 0 | 0 | 0 | 0 |
| | | ನ.ರಾ.ಪುರ | – | – | – | – | 1 | 2.00 | 0 | 0 | 1 | 2.00 | 1 | 2.00 |
| | ಒಟ್ಟು | | 5 | 10.00 | 5 | 10.00 | 11 | 22.00 | 11 | 22.00 | 8 | 16.00 | 8 | 15.00 |
| 3 | ಚೇತನ ಯೋಜನೆ | ಚಿಕ್ಕಮಗಳೂರು | 6 | 1.23 | 6 | 1.23 | 13 | 2.67 | 13 | 2.67 | 1 | 0.51 | 1 | 0.51 |
| | | ಕಡೂರು | 9 | 1.85 | 9 | 1.85 | 13 | 2.67 | 13 | 2.67 | 1 | 0.50 | 1 | 0.50 |
| | | ತರೀಕೆರೆ | 1 | 0.21 | 1 | 0.21 | 1 | 0.21 | 1 | 0.21 | 1 | 0.51 | 1 | 0.51 |
| | | ಮೂಡಿಗೆರೆ | 1 | 0.20 | 1 | 0.20 | 1 | 0.20 | 1 | 0.20 | 1 | 0.50 | 1 | 0.50 |
| | | ಕೊಪ್ಪ | – | – | – | – | 1 | 0.20 | 1 | 0.20 | 0 | 0 | 0 | 0 |
| | | ಶೃಂಗೇರಿ | – | – | – | – | – | – | – | – | 1 | 0.50 | 1 | 0.50 |
| | | ನ.ರಾ.ಪುರ | 1 | 0.20 | 1 | 0.20 | 1 | 0.20 | 1 | 0.20 | 0 | 0 | 0 | 0 |
| | ಒಟ್ಟು | | 18 | 3.69 | 18 | 3.69 | 30 | 6.15 | 30 | 6.15 | 5 | 2.52 | 5 | 2.52 |

| | | | | | | | | | | | | | | |
|---|---|---|---|---|---|---|---|---|---|---|---|---|---|---|
| 4 | ಸಮೃದ್ಧಿ ಯೋಜನೆ | ಚಿಕ್ಕಮಗಳೂರು | 0 | 0 | 0 | 0 | 35 | 3.50 | 35 | 3.50 | 20 | 2.00 | 20 | 2.00 |
| | | ಕಡೂರು | 0 | 0 | 0 | 0 | 35 | 3.50 | 35 | 3.50 | 20 | 2.00 | 20 | 2.00 |
| | | ತರೀಕೆರೆ | 0 | 0 | 0 | 0 | 25 | 2.50 | 18 | 1.80 | 20 | 2.00 | 20 | 2.00 |
| | | ಮೂಡಿಗೆರೆ | 0 | 0 | 0 | 0 | 25 | 2.50 | 25 | 2.50 | 20 | 2.00 | 20 | 2.00 |
| | | ಕೊಪ್ಪ | 0 | 0 | 0 | 0 | 10 | 1.00 | 24 | 2.40 | 8 | 0.80 | 0 | 0 |
| | | ಶೃಂಗೇರಿ | 0 | 0 | 0 | 0 | 10 | 1.00 | 5 | 0.50 | 6 | 0.60 | 15 | 1.50 |
| | | ನ.ರಾ.ಪುರ | 0 | 0 | 0 | 0 | 10 | 1.00 | 0 | 0.00 | 6 | 0.60 | 5 | 0.50 |
| | ಒಟ್ಟು | | 0 | 0 | 0 | 0 | 150 | 15.00 | 142 | 14.20 | 100 | 10.00 | 100 | 10.00 |
| 5 | ಧನಶ್ರೀ ಯೋಜನೆ | ಚಿಕ್ಕಮಗಳೂರು | 0 | 0 | 0 | 0 | 15 | 7.58 | 15 | 7.58 | 6 | 3.03 | 7 | 3.54 |
| | | ಕಡೂರು | 0 | 0 | 0 | 0 | 3 | 1.51 | 3 | 1.51 | 5 | 2.52 | 10 | 5.05 |
| | | ತರೀಕೆರೆ | 0 | 0 | 0 | 0 | 3 | 1.51 | 3 | 1.51 | 5 | 2.52 | 4 | 2.02 |
| | | ಮೂಡಿಗೆರೆ | 0 | 0 | 0 | 0 | 4 | 2.02 | 4 | 2.02 | 5 | 2.52 | 2 | 1.01 |
| | | ಕೊಪ್ಪ | 0 | 0 | 0 | 0 | 4 | 2.02 | 4 | 2.02 | 3 | 1.52 | 1 | 0.51 |
| | | ಶೃಂಗೇರಿ | 0 | 0 | 0 | 0 | 1 | 0.51 | 1 | 0.51 | 1 | 0.51 | 1 | 0.50 |
| | | ನ.ರಾ.ಪುರ | 0 | 0 | 0 | 0 | 0 | 0 | 0 | 0 | 1 | 0.51 | 0 | 0 |
| | ಒಟ್ಟು | | 0 | 0 | 0 | 0 | 30 | 15.15 | 30 | 15.15 | 26 | 13.13 | 25 | 12.63 |
| 6 | ಲಿಂಗತ್ವ ಅಲ್ಪಸಂಖ್ಯಾತರ ಪುನರ್ವಸತಿ ಯೋಜನೆ | ಚಿಕ್ಕಮಗಳೂರು | 0 | 0 | 0 | 0 | 4 | 0.82 | 6 | 1.23 | 2 | 1.01 | 4 | 2.02 |
| | | ಕಡೂರು | 0 | 0 | 0 | 0 | 4 | 0.82 | 5 | 1.03 | 2 | 1.01 | 2 | 1.01 |
| | | ತರೀಕೆರೆ | 0 | 0 | 0 | 0 | 4 | 0.82 | 4 | 0.82 | 2 | 1.01 | 3 | 1.51 |
| | | ಮೂಡಿಗೆರೆ | 0 | 0 | 0 | 0 | 4 | 0.82 | 3 | 0.61 | 2 | 1.01 | 1 | 0.51 |
| | | ಕೊಪ್ಪ | 0 | 0 | 0 | 0 | 2 | 0.41 | 1 | 0.21 | 1 | 0.51 | 0 | 0 |
| | | ಶೃಂಗೇರಿ | 0 | 0 | 0 | 0 | 1 | 0.21 | 0 | 0.00 | 1 | 0.50 | 0 | 0 |
| | | ನ.ರಾ.ಪುರ | 0 | 0 | 0 | 0 | 1 | 0.21 | 0 | 0.00 | 0 | 0 | 0 | 0 |
| | ಒಟ್ಟು | | 0 | 0 | 0 | 0 | 20 | 4.11 | 19 | 3.90 | 10 | 5.05 | 10 | 5.05 |
| 7 | ಮಹಿಳಾ ತರಬೇತಿ ಯೋಜನೆ | ಚಿಕ್ಕಮಗಳೂರು | 130 | 6.86 | 80 | 4.40 | 134 | 3.75 | 134 | 3.75 | 70 | 4.50 | 5 | 0.12 |
| | | ಕಡೂರು | 0 | 0 | 0 | 0 | 25 | 1.87 | 25 | 1.87 | 20 | 2.00 | 1 | 0.02 |
| | | ತರೀಕೆರೆ | 0 | 0 | 0 | 0 | 55 | 3.69 | 55 | 3.69 | 20 | 2.00 | 1 | 0.03 |
| | | ಮೂಡಿಗೆರೆ | 0 | 0 | 0 | 0 | 50 | 1.36 | 0 | 0 | 0 | 0 | 1 | 0.03 |
| | | ಕೊಪ್ಪ | 0 | 0 | 0 | 0 | 0 | 0 | 0 | 0 | 12 | 1.20 | 2 | 0.05 |
| | | ಶೃಂಗೇರಿ | 0 | 0 | 0 | 0 | 30 | 1.85 | 30 | 0.93 | 42 | 3.20 | 2 | 0.05 |
| | | ನ.ರಾ.ಪುರ | 0 | 0 | 0 | 0 | 0 | 0 | 0 | 0 | 0 | 0.00 | 1 | 0.03 |
| | ಒಟ್ಟು | | 130 | 6.86 | 80 | 4.40 | 294 | 12.52 | 244 | 10.24 | 164 | 12.90 | 13 | 0.33 |

| | | | | | | | | | | | | | | |
|---|---|---|---|---|---|---|---|---|---|---|---|---|---|---|
| 8 | ಮಾರುಕಟ್ಟೆ ಯೋಜನೆ | ಚಿಕ್ಕಮಗಳೂರು | 45 | 0.95 | 63 | 0.95 | 75 | 1.63 | 75 | 1.45 | 0 | 0.00 | 0 | 0 |
| | | ಕಡೂರು | 30 | 0.60 | 32 | 0.60 | 0 | 0 | 0 | 0 | 0 | 0.00 | 0 | 0 |
| | | ತರೀಕೆರೆ | 0 | 0 | 0 | 0 | 0 | 0 | 0 | 0 | 0 | 0.00 | 0 | 0 |
| | | ಮೂಡಿಗೆರೆ | 30 | 0.60 | 33 | 0.60 | 30 | 0.68 | 30 | 0.50 | 0 | 0.00 | 0 | 0 |
| | | ಕೊಪ್ಪ | 0 | 0 | 0 | 0 | 0 | 0 | 0 | 0 | 0 | 0.00 | 0 | 0 |
| | | ಶೃಂಗೇರಿ | 0 | 0 | 0 | 0 | 0 | 0 | 0 | 0 | 0 | 0.00 | 0 | 0 |
| | | ನ.ರಾ.ಪುರ | 0 | 0 | 0 | 0 | 0 | 0 | 0 | 0 | 0 | 0.00 | 0 | 0 |
| | ಒಟ್ಟು | | 105 | 2.15 | 128 | 2.15 | 105 | 2.31 | 105 | 1.95 | 0 | 0.00 | 0 | 0 |
| 9 | ಸ್ವ ಉದ್ಯೋಗ ಮಾರ್ಗದರ್ಶನ ಕೇಂದ್ರ | | | | | | | | | | | | | |
| | | ಜಿಲ್ಲಾ ಮಟ್ಟ | 300 | 2.10 | 94 | 1.52 | 400 | 2.10 | 400 | 2.10 | 300 | 2.94 | 300 | 2.94 |
| 10 | ಸವಿರುಚಿ ಯೋಜನೆ | | | | | | | | | | | | | |
| | | ಜಿಲ್ಲಾ ಮಟ್ಟ | 0 | 0.00 | 0 | 0.00 | 0 | 0.00 | 0 | 0.00 | 1 | 10.00 | 1 | 10.00 |

************

# ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಧರ್ಮೇಗೌಡ ಇವರ ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ:557ಕ್ಕೆ ಅನುಬಂಧ-3.

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

- ಆದಾಯೋತ್ಪನ್ನಕರ ಚಟುವಟಿಕೆಯಲ್ಲಿ ತೊಡಗಿರುವ ಗುಂಪುಗಳಿಗೆ ಪ್ರೋತ್ಸಾಹಧನ ರೂ.5000/-.

- ರೂ.75000/-ರಿಂದ ರೂ.100000/-ಗಳವರೆಗೆ ಉಳಿತಾಯ ಮಾಡಿರುವ ಗುಂಪುಗಳಿಗೆ ರೂ.15000/- ಹಾಗೂ ರೂ.100000/-ಕ್ಕಿಂತ ಮೇಲ್ಪಟ್ಟು ಉಳಿತಾಯ ಮಾಡಿರುವ ಗುಂಪುಗಳಿಗೆ ರೂ.20000/- ಅಧಿಕ ಉಳಿತಾಯ ಪ್ರೋತ್ಸಾಹಧನ

- ಗುಂಪಿನಲ್ಲಿ 15ರಿಂದ 20 ಸದಸ್ಯರಿದ್ದು, ಯೋಜನೆ ಪ್ರಾರಂಭದಿಂದ ಗುಂಪುಗಳು ಸತತವಾಗಿ 10 ವರ್ಷ ಕಾರ್ಯನಿರತರಾಗಿದ್ದು, ಗುಂಪಿನ ಎಲ್ಲಾ ಸದಸ್ಯರು ಆಂತರಿಕ ಸಾಲ ಮತ್ತು ಬ್ಯಾಂಕ್ ಸಾಲ ಪಡೆದಿದ್ದು, ಮರುಪಾವತಿ ಕ್ರಮಬದ್ಧವಾಗಿದ್ದು, ಆದಾಯೋತ್ಪನ್ನ ಚಟುವಟಿಕೆಯಲ್ಲಿ ತೊಡಗಿರುವ ಗುಂಪುಗಳಿಗೆ ರೂ.5000/-ರಿಂದ ರೂ.25000/-ವರೆಗೆ ಸುತ್ತುನಿಧಿಯನ್ನು ಗುಂಪುಗಳ ಖಾತೆಗೆ ಆರ್.ಟಿ.ಜಿ.ಎಸ್. ಮೂಲಕ ಜಮೆ ಮಾಡಲಾಗಿದೆ.

## ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

- ತಾಲ್ಲೂಕುವಾರು ಗುರಿಗಳನ್ನು ನಿಗದಿಪಡಿಸುವ ವ್ಯವಸ್ಥೆ ಇರುವುದಿಲ್ಲ. ಜಿಲ್ಲೆಗಳಲ್ಲಿನ ವಿಕಲಚೇತನರ ಸಂಖ್ಯೆಗನುಗುಣವಾಗಿ ಹಾಗೂ ನಿಜವಾದ ಬೇಡಿಕೆಯನ್ನು ಆಧರಿಸಿ ಜಿಲ್ಲಾವಾರು ಗುರಿ ನಿಗದಿಪಡಿಸಲಾಗುತ್ತಿದೆ.

## ಕನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ

- ಆಯಾ ಯೋಜನೆಗಳಲ್ಲಿ ಸೌಲಭ್ಯ ನೀಡಲಾಗುತ್ತಿರುವ ವಿವಿಧ ವರ್ಗಗಳ ಮಹಿಳೆಯರ ಜಿಲ್ಲಾವಾರುಜನಸಂಖ್ಯೆಯನ್ನು ಆಧರಿಸಿ ಕರ್ನಾಟಕರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮಾರ್ಗಸೂಚಿಯನ್ವಯಜಿಲ್ಲಾವಾರುಗುರಿಯನ್ನು ನಿಗದಿಪಡಿಸಲಾಗುವುದು. ಜಿಲ್ಲಾ ಮಟ್ಟದಲ್ಲಿಉದ್ಯೋಗಿನಿ, ಕಿರುಸಾಲ, ಸಮೃದ್ಧಿ ಯೋಜನೆಗಳಡಿ ವಿಧಾನಸಭಾಕ್ಷೇತ್ರವಾರುಗುರಿ ನಿಗದಿಪಡಿಸಲಾಗುತ್ತದೆ.

************